(9)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಯಲಹಂಕ ವಲಯ

ಸಂಖ್ಯೆ: ಬಿಬಿಎಂಪಿ/ಜಂ.ಆ/ಯವ/ಆ.ಅ(ಯ.ವಿ)/AS/15-16
BH

ಜಂಟಿ ಆಯುಕ್ತರು ರವರ ಕಛೇರಿ
ಯಲಹಂಕ ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬಳ್ಳಾರಿ ರಸ್ತೆ, ಬೆಂಗಳೂರು-92.
ದಿನಾಂಕ: 29-2-2016

ಆಡಳಿತಾತ್ಮಕ ಅನುಮೋದನೆ

ವಿಷಯ:- Construction of Additional Class rooms, toilet and Providing school accessories to Yelahanka Government Junior College Yelahanka Bangalore in ward No.01.
Est.Cost Rs.125.00 Lakhs

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯಪಾಲಕ ಅಭಿಯಂತರರು (ಯೋಜನೆ ವಿಭಾಗ) ರವರು 2015-16 ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಗಳೊಳಗೊಂಡಂತೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯಕ್ಕೆ 2014-15ನೇ ಸಾಲಿನ **P3089 Special Development Works in 7 CMC and 1 TMC area in BBMP** ರ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕಾಮಗಾರಿಯ ಸಂಕೇತ:**001-16-000002** ನೀಡಲಾಗಿದೆ. ಮೇಲ್ಕಂಡ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು **ರೂ.125.00** ಲಕ್ಷಗಳಿಗೆ ತಯಾರಿಸಿದ್ದು, ಮೇಲ್ಕಂಡ ಕಾಮಗಾರಿಗೆ ಮಾನ್ಯ ಆಯುಕ್ತರು ರವರು ಸಂಖ್ಯೆ:ಪಿ.ಎಸ್.ಆರ್/ಜಿ/3470/15-16, ದಿನಾಂಕ:12.06.2015 ರಲ್ಲಿ ಅನುಮೋದಿಸಿರುತ್ತಾರೆ. ಅದರಂತೆ, ಈ ಕೆಳಗಿನ ಷರತ್ತುಗಳಂತೆ ಪುಸ್ತಕ ಪಟ ಸಂಖ್ಯೆ 30 ಕ್ರ.ಸಂ 84 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ದಾಖಲಿಸಲಾಗಿದೆ.

ಷರತ್ತುಗಳು:-

01. ಅಂದಾಜಿನಲ್ಲಿ ಅಳವಡಿಸಿರುವ ಮಾರುಕಟ್ಟೆ ದರಗಳಿಗೆ ಹಾಗೂ ದರಪಟ್ಟಿಯಲ್ಲಿ ದರ ಲಭ್ಯವಿಲ್ಲದ ಬಾಬ್ತುಗಳಿಗೆ ಮೂಲಾಧಾರಿತ ದರ ಹಾಗೂ ಕೊಟೇಷನ್‌ಗಳನ್ನು ತಯಾರಿಸಿ, ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆಯತಕ್ಕದ್ದು,
02. ಅಂದಾಜಿನಲ್ಲಿ ಪರಿಮಾಣಗಳನ್ನು ಮತ್ತು ದರಗಳನ್ನು ಮತ್ತೊಮ್ಮೆ ಪರಿಶೀಲಿಸಿಕೊಳ್ಳತಕ್ಕದು,
03. ಈ ಹಿಂದೆ ತಾಂತ್ರಿಕ ಮಂಜೂರಾತಿ ಅನುಮೋದನೆ ನೀಡಲಾದ ಅಂದಾಜುಗಳಲ್ಲಿನ ಬಾಬ್ತುಗಳು ಮತ್ತು ಬಾಬ್ತುಗಳ ಪರಿಮಾಣಗಳು ಈ ಅಂದಾಜುಗಳಲ್ಲಿ ಮರುಕಳಿದಿರುವುದಕ್ಕೆ ಪರಿಶೀಲಿಸಿ, ದೃಢೀಕರಿಸಿಕೊಂಡ ನಂತರವೇ ಈ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ಸೂಕ್ತಕ್ರಮ ಅನುಸರಿಸತಕ್ಕದ್ದು,
04. ಇತ್ತೀಚಿನ ಪಾರದರ್ಶಕ ನಿಯಮಾವಳಿಯ ಪ್ರಕಾರವೇ ಸದರಿ ಕಾಮಗಾರಿಯನ್ನು ಕೈಗೊಳ್ಳುವಲ್ಲಿ ಸೂಕ್ತಕ್ರಮ ಅನುಸರಿಸತಕ್ಕದ್ದು,
05. ಅಂದಾಜುಪಟ್ಟಿಯ ಮೊತ್ತವು ಮಂಜೂರಾತಿಯಾದ ಮೊತ್ತಕ್ಕಿಂತ ಮೀರಿರಬಾರದು,
06. ಮೇಲಿನ ಕಾಮಗಾರಿಯನ್ನು ನಿಖರವಾದ ಐ.ಆರ್.ಸಿ ಮಾರ್ಗಸೂಚಿಯ ಪ್ರಕಾರ ನಿರ್ವಹಿಸಬೇಕಾಗಿರುತ್ತದೆ,
07. ಕೆಲಸ ಪ್ರಾರಂಭಿಸುವ ಮುನ್ನ ಕಾಮಗಾರಿ ನಡೆಯುವ ಸ್ಥಳವು ವಿವಾದಗಳಿಂದ ಮುಕ್ತವಾಗಿದೆಯೆಂದು ಪರಿಶೀಲಿಸತಕ್ಕದ್ದು,
08. ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು,
09. ಕಾಮಗಾರಿಯನ್ನು ಮೌಲ್ಯ ಪ್ರಮಾಣ ವಿವರಣೆಯ (Standard Specification) ಪ್ರಕಾರ ನಿರ್ವಹಿಸತಕ್ಕದ್ದು,
10. ಕಾಮಗಾರಿ ಪೂರ್ಣಗೊಂಡ ನಂತರ ನಿಗಧಿತ ಅವಧಿಯೊಳಗೆ ಯುಟಿಲೈಜೇಷನ್ ಪ್ರಮಾಣಪತ್ರ ಹಾಗೂ ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.
11. ಕರಾರಿನಲ್ಲಿರುವಂತೆ ವೆಚ್ಚವನ್ನು ನಿರ್ಬಂಧಿಸತಕ್ಕದ್ದು,
12. ಮಂಜೂರಾದ ಕಾಮಗಾರಿಯಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಡು ಆಗಿದ್ದಲ್ಲಿ ಅನುಷ್ಠಾನ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ,
13. ಇಡುಗಂಟು ಅಳವಡಿಕೆಯಲ್ಲಿ ಇರುವ ಮೊತ್ತಕ್ಕೆ ವಿಸ್ತಾರವಾಗಿ ತಯಾರಿಸಿ ಅನುಮೋದನೆಯನ್ನು ಪಡೆಯತಕ್ಕದ್ದು,
14. ಪ್ರಮಾಣೀಕರಿಸಿದ ಸಾಗಾಣಿಕೆ ಪಟ್ಟಿ ಹಾಗೂ ನಿಯೋಜಿತ ವಿಲೇವಾರಿ ಸ್ಥಳಗಳಿಗೆ ಅನುಮೋದನೆಯನ್ನು ಪಡೆಯತಕ್ಕದ್ದು.
15. ಈ ಆಡಳಿತಾತ್ಮಕ ಅನುಮೋದನೆಯು ಕೇವಲ ಟಿಂಡರ್ ಕರೆಯಲು ತಾತ್ವಿಕವಾಗಿ ನೀಡಲಾಗಿದ್ದು, ತದನಂತರ ಸರ್ಕಾರದ ಅಧಿಕಾರಯುಕ್ತ ಸಮಿತಿಯಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಸ್ಥಿರೀಕರಿಸಿಕೊಳ್ಳುವ ನಿಬಂಧನೆಗೆ ಒಳಪಟ್ಟಿರುತ್ತದೆ.

ಜಂಟಿ ಆಯುಕ್ತರು
ಯಲಹಂಕ ವಲಯ.
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮೈಲರಾಯನಪುರ, ಬೆಂಗಳೂರು 92

ಪ್ರತಿಯನ್ನು:
01. ಕಾರ್ಯಪಾಲಕ ಅಭಿಯಂತರರು, (ಯೋಜನೆ ವಿಭಾಗ) ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
02. ಮುಖ್ಯ ಲೆಕ್ಕಾಧಿಕಾರಿಗಳು, ಬಿಬಿಎಂಪಿ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.